ಕಾಯಿಲೆಯೇ. ಪ್ರಾಣ ಕಳೆದುಕೊಂಡವರೇ ಬಹಳ. ಅದಕ್ಕೇ ಅಂತ ನಿರ್ದಿಷ್ಟ ಔಷಧಿಯೂ ಇಲ್ಲ. ''ಮುಖ್ಯವಾಗಿ ಯಾರಾದರೊಬ್ಬರು ಯಾವಾಗಲೂ ಜೊತೆಗಿದ್ದು ಜ್ವರವನ್ನು ಗಮನಿಸಿ ತಾಪಮಾನ ಬರೆದಿಟ್ಟುಕೊಳ್ಳಿ'' ಎಂದು ಹೇಳಿ ಒಂದಷ್ಟು ಗುಳಿಗೆ ಕೊಟ್ಟರು. ''ಹಾಸನದಲ್ಲಿ ಇರಲು ನಿಮಗೆ ವ್ಯವಸ್ಥೆ ಉಂಟೋ?'' ಎಂದರು. 'ಇರಬೇಕೆಂದಾದರೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತೇನೆ. ಸ್ನಾನ, ಪೂಜೆ, ತಿಂಡಿ ಎಲ್ಲವೂ ಕಷ್ಟವೇ...' ಅನುಮಾನಿಸುತ್ತ ಹೇಳಿದೆ. ಡಾಕ್ಟರು ನಕ್ಕರು. ''ಸ್ನಾನ, ಸಂಧ್ಯಾವಂದನೆ ಅನ್ನಿ. ಬಿಡುವುದು ಕಷ್ಟ. ಮಗನಿಗಾಗಿ 'ಆಯಿತು' ಅಂದುಕೊಳ್ಳುತ್ತಾ ಇದ್ದೀರಿ. ನೀವು ನಾನು ಹೇಳಿದ ಎಲ್ಲ ಎಚ್ಚರಿಕೆ ವಹಿಸುತ್ತೀರಿ ಅಂತಾದರೆ ಮನೆಗೇ ಕರೆದುಕೊಂಡು ಹೋಗಿ. ನಾನು ದಿನಕ್ಕೊಮ್ಮೆ ಬಂದು ತಪಾಸಣೆ ಮಾಡಿ ಹೋಗುತ್ತೇನೆ. ನನ್ನ ಕಾರಿನ ಪೆಟ್ರೋಲು ಖರ್ಚು ಕೊಟ್ಟರೆ ಸಾಕು, ಆದೀತೋ?'' ಎಂದರು. ಕಣ್ಣು ತುಂಬಿ ಬಂತು. ''ಅಷ್ಟೂ ಮಾಡಲಾಗದಷ್ಟು ಅಯೋಗ್ಯನಲ್ಲ ಸ್ವಾಮಿ, ಮಗನನ್ನು ಉಳಿಸಿಕೊಡಿ, ಸಾಕು'' ಎಂದೆ. ಬೆನ್ನು ತಟ್ಟಿ ಕಳಿಸಿದರು. ಒಂದು ಟ್ಯಾಕ್ಸಿ ಮಾಡಿಕೊಂಡು ನಮ್ಮೂರಿಗೆ ವಾಪಸು ಬಂದೆವು.

ಮಗನ ಜ್ವರ ಏರುವುದು, ಇಳಿಯುವುದು ನಡೆಯುತ್ತಲೇ ಇತ್ತು. ಬರ್ಫದ ತಣ್ಣನೆಯ ನೀರನ್ನು ಹಣೆಗಿಟ್ಟು ಜ್ವರ ಇಳಿಸುವ ಪ್ರಯತ್ನ ಸತತವಾಗಿಯೇ ಮಾಡಿದೆ. ಮನೆಗೆಲಸ, ಕೊಟ್ಟಿಗೆ ಕೆಲಸ ಅಂತ ಇವಳಿಗೆ ಇಡೀ ದಿನ ಕೆಲಸ. ಹಗಲೂ ರಾತ್ರಿ ಜಾಗರಣೆಯೇ ಆಯಿತು. ಆಗಾಗ ಕಣ್ಣು ತೆರೆಯುತ್ತಿದ್ದ. ಮಾತೂ ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಹೇಳಿದಂತೆ ಹಾಸನದ ಪಂಡಿತ ಡಾಕ್ಟರು ದಿನಾಲೂ ಬಂದು ತಪಾಸಣೆ ಮಾಡಿ ಔಷಧಿ ಬದಲಾವಣೆ ಇದ್ದರೆ ಅವರೇ ಕೊಟ್ಟು ಹೋಗುತ್ತಿದ್ದರು. ಮೊದಲ ಒಂದು ವಾರ ಮಾತ್ರ ಪರಿಸ್ಥಿತಿ ತುಂಬ ಸೂಕ್ಷ್ಮವಾಗಿದೆ, ಎಚ್ಚರಿಕೆಯಿಂದ ನೋಡಿಕೊಳ್ಳಿ ಅಂತ ಹೇಳಿ ಹೋಗುತ್ತಿದ್ದರು. ಹತ್ತಿರದ ಸಂಬಂಧಿಕರು, ಗೆಳೆಯರು ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು. ಅದರಿಂದ ಕಿಂಚಿತ್ ಧೈರ್ಯ ಬರುತ್ತಿತ್ತು, ನಿಜ, ಜೊತೆಗೆ ಭಯವೂ ಆಗುತ್ತಿತ್ತು. ಹೀಗೆ ಊರ ಜನರೆಲ್ಲ ಬಂದು ನೋಡಿಕೊಂಡು ಹೋಗಬೇಕೆಂದರೆ ಪರಿಸ್ಥಿತಿ ತೀರ ಗಂಭೀರವಾಗಿದೆ ಎಂದು ಡಾಕ್ಟರರು ಹೇಳಿದ್ದಾರೇನೋ, ನನ್ನ ಬಳಿ ಸಮಾಧಾನದ ಮಾತುಗಳನ್ನಷ್ಟೇ ಹೇಳಿದರೇನೋ

